ಅಕ್ರಮ ಖಾತೆ ಮಾಡಿರುವುದು

2075 (2533); ಶ್ರೀ ಕೃಷ್ಣಾರೆಡ್ಡಿ ಎಂ. (ಚಿಂತಾಮಣಿ)

ಅ) ಚಿಂತಾಮಣಿ ನಗರದ ಕನಂಪಲ್ಲಿಯಲ್ಲಿರುವ ಸರ್ವೆ ನಂ. 11 ರ 1–19 ಎಕರೆ ಗುಂಟೆ ಹುಲ್ಲು–ಬನ್ನಿ ಖರಾಬ್ ಸರ್ಕಾರಿ ಜಮೀನನ್ನು ಅಕ್ರಮ ಖಾತೆಗಳಡಿ ನಗರಸಭೆಯ ದಾಖಲು ಮಾಡಿ ಸರ್ಕಾರಿ ನೌಕರರ ಗೃಹ ಮಂಡಳಿಗೆ ಮಾರಾಟ ಮಾಡಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

ಆ) ಬಂದಿದ್ದಲ್ಲಿ, ಆ ಕುರಿತು ಸರ್ಕಾರವು ಕೈಗೊಂಡ ಕಾನೂನು ಕ್ರಮಗಳೇನು;

ಇ) ಸರ್ವೆ ನಂ. 11 ರಲ್ಲಿ 1–19 ಎಕರೆ/ಗುಂಟೆ ಹುಲ್ಲು–ಬನ್ನಿ ಖರಾಬ್ ಜಮೀನಿನಲ್ಲಿ ಎಷ್ಟು ನಿವೇಶನಗಳನ್ನು ಮತ್ತು ಮನೆಗಳನ್ನು ನಿರ್ಮಾಣ ಮಾಡಲಾಗಿದೆ; ಅವು ಯಾವುವು (ವಿವರ ನೀಡುವುದು);

ಈ) ಅಕ್ರಮ ಖಾತೆ ಮಾಡಿರುವ ಅಧಿಕಾರಿಗಳ ಮೇಲೆ ಕಾನೂನು ಕ್ರಮ ಕೈಗೊಳ್ಳಲಾಗುವುದೇ (ವಿವರ ನೀಡುವುದು)?

ಶ್ರೀ ವಿ. ಶ್ರೀನಿವಾಸ ಪ್ರಸಾದ್ (ಕಂದಾಯ ಸಚಿವರು)

ಅ) ಸರ್ಕಾರದ ಗಮನಕ್ಕೆ ಬಂದಿರುತ್ತದೆ.

ಆ) ಕನಂಪಲ್ಲಿಯಲ್ಲಿರುವ ಸರ್ವೆ ನಂಬರ್ 11 ರ 1–19 ಗುಂಟೆ ಹುಲ್ಲುಬನ್ನಿ ಖರಾಬ್ ಸರ್ಕಾರಿ ಜಮೀನನ್ನು ಜಿಲ್ಲಾಧಿಕಾರಿಗಳು, ತಾಂತ್ರಿಕ ಸಹಾಯಕರು ಸ್ಥಳ ತನಿಖೆ ಮಾಡಿದ್ದು, ಸದರಿ ಸರ್ವೆ ನಂಬರ್ ಸ್ಕೇಲ್ ನಂಬರ್ ಆಗಿರುವುದರಿಂದ ಪಕ್ಕಾ ಸರ್ವೆ ಮಾಡಬೇಕಿದ್ದು, ಒತ್ತುವರಿ ಬಗ್ಗೆ ಟಿಪ್ಪಣಿ ನೀಡಿದ ನಂತರ ಕ್ರಮ ಕೈಗೊಳ್ಳಲಾಗುವುದು.

ಇ) ಡಿ.ಡಿ.ಎಲ್.ಆರ್. ರವರು ಸರ್ವೆ ಮಾಡಿಸಿ ಟಿಪ್ಪಣಿ ನೀಡಿದ ನಂತರವೇ ಒತ್ತುವರಿಯಾಗಿರುವ ಬಗ್ಗೆ ಹಾಗೂ ಎಷ್ಟು ನಿವೇಶನಗಳನ್ನು ನಿರ್ಮಾಣ ಮಾಡಲಾಗಿದೆ ಎಂಬ ಬಗ್ಗೆ ಸ್ಪಷ್ಟ ಮಾಹಿತಿ ದೊರಕುತ್ತದೆ.

ಈ) ಅಕ್ರಮವಾಗಿ ಖಾತೆ / ನಿವೇಶನ ನಿರ್ಮಿಸಲು ಅವಕಾಶ ಮಾಡಿಕೊಟ್ಟ ಅಧಿಕಾರಿಗಳ ವಿರುದ್ಧ ಕಾನೂನಿನಂತೆ ಕ್ರಮ ಕೈಗೊಳ್ಳಲಾಗುವುದು.

ಜವಳಿ ಕಾರ್ಯಗಾರವನ್ನು ಅಭಿವೃದ್ಧಿಪಡಿಸುವುದು

2076 (2534); ಶ್ರೀ ಕೃಷ್ಣಾರೆಡ್ಡಿ, (ಚಿಂತಾಮಣಿ)

ಅ) ಚಿಕ್ಕಬಳ್ಳಾಪುರ ಜಿಲ್ಲೆ ಚಿಂತಾಮಣಿ ತಾಲ್ಲೂಕು ಅಂಬಾಜಿದುರ್ಗ ಹೋಬಳಿ, ಸೊರಪಲ್ಲಿ ಗ್ರಾಮದ ಸರ್ವೆ ನಂ 39 ರ 10 ಎಕರೆ ಜಮೀನಿನಲ್ಲಿ ನೇಕಾರರಿಗೆ ವಸತಿ ಮತ್ತು ಕಾರ್ಯಾಗಾರವನ್ನು ಅಭಿವೃದ್ಧಿಪಡಿಸುವ ಪ್ರಸ್ತಾವನೆ ಸರ್ಕಾರದ ಗಮನಕ್ಕೆ ಬಂದಿದೆಯೇ?

ಆ) ಬಂದಿದ್ದಲ್ಲಿ ಈ ಬಗ್ಗೆ ಸರ್ಕಾರ ಕೈಗೊಂಡ ಕ್ರಮಗಳೇನು (ವಿವರ ನೀಡುವುದು)

ಇ) ಕಾರ್ಯಾಗಾರವನ್ನು ಅಭಿವೃದ್ಧಿಪಡಿಸಲು ಸರ್ಕಾರವು ಎಷ್ಟು ಮೊತ್ತವನ್ನು ಬಿಡುಗಡೆ ಮಾಡಿದೆ, ಯಾವ ಕಾಲ ಮಿತಿಯೊಳಗೆ ಕಾಮಗಾರಿಯನ್ನು ಪೂರ್ಣಗೊಳಿಸಲಾಗುವುದು (ವಿವರಣೆ ನೀಡುವುದು)

ಶ್ರೀ ಬಾಬುರಾವ್ ಚಿಂಚನಸೂರ್ (ಮಾನ್ಯ ಜವಳಿ ಬಂದರು ಮತ್ತು ಒಳನಾಡು ಜಲಸಾರಿಗೆ ಸಚಿವರು)

ಅ) ಬಂದಿದೆ.